**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1902/2025**

| | | |
|---|---|---|
| ಸಾಕ್ಷಿದಾರರ ಹೆಸರು | : ಚಂದ್ರಶೇಖರ್ ಎ.ಎಂ | ಪ್ರಾಸಾ-9 |
| ತಂದೆಯ ಹೆಸರು | : ಮುನೇಂದ್ರಪ್ಪ | ಚಾಸಾ-24 |
| ವಯಸ್ಸು | : 30 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಪಿ.ಎಸ್.ಐ. | ದಿನಾಂಕಃ 10.03.2026. |
| ವಾಸಸ್ಥಳ | : ಕಳಸ ಪೋಲಿಸ್ ಠಾಣೆ. | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು ದಿ.14.02.2025 ರಿಂದ ಇಲ್ಲಿಯವರೆಗೂ ಕಳಸ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.14.02.2025 ರಂದು ನಾನು ಕಳಸ ಪೋಲಿಸ್ ಠಾಣೆಯ PSI ಆಗಿ ಕರ್ತವ್ಯಕ್ಕೆ ಸೇರಿಕೊಂಡು ನಂತರ ಪ್ರಕರಣದ ಕಡತವನ್ನು ಚಾಸಾ-23 ರವರಿಂದ ಸ್ವೀಕರಿಸಿ, ಅದೇ ದಿನ ಚಾಸಾ-10 ಮತ್ತು 11 ರವರ ಹೇಳಿಕೆಯನ್ನು ದಾಖಲು ಮಾಡಿಕೊಂಡು ಮತ್ತು ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ.12.03.2025 ರಂದು ಕೃತ್ಯ ನಡೆದ ಸ್ಥಳದ ಬಗ್ಗೆ ದಾಖಲಾತಿಗಳನ್ನು ಕೋರಿ ಕಳಸದ ತಹಶೀಲ್ದಾರ್ ರವರಿಗೆ ಮನವಿಯನ್ನು ಮಾಡಿಕೊಂಡಿರುತ್ತೇನೆ. ದಿ.05.04.2025 ರಂದು ಚಾಸಾ-12 ರವರಿಂದ ಗಾಯಾಳುವಿನ ಗಾಯದ ಪ್ರಮಾಣ ಪತ್ರವನ್ನು ಕೋರಿ ಮನವಿಯನ್ನು ಮಾಡಿಕೊಂಡಿರುತ್ತೇನೆ. ಅದೇ ದಿನ ಗಾಯಾಳುವಿನ ಗಾಯದ ಕುರಿತು ಹೆಚ್ಚಿನ ಮಾಹಿತಿಗಾಗಿ ಚಾಸಾ-12 ರವರಿಗೆ ಮನವಿ ಮಾಡಿಕೊಂಡಿರುತ್ತೇನೆ ಮತ್ತು ಅದೇ ದಿನ ಪೂರ್ಣ ವರದಿಯನ್ನು ಚಾಸಾ-12 ರವರಿಂದ ಪಡೆದುಕೊಂಡಿರುತ್ತೇನೆ. ದಿ.17.04.2025 ರಂದು ರಾಜ್ಯಸ್ವ ಅಧಿಕಾರಿಯವರಿಂದ ದಾಖಲಾತಿಯನ್ನು ಕೋರಿ ಮನವಿಯನ್ನು ಮಾಡಿಕೊಂಡಿರುತ್ತೇನೆ. ದಿ.06.05.2025 ರಂದು ಚಾಸಾ-18 ರವರಿಂದ ಕೃತ್ಯ ನಡೆದ ಸ್ಥಳದ ಬಗ್ಗೆ ದಾಖಲಾತಿಯನ್ನು ಪಡೆದುಕೊಂಡಿರುತ್ತೇನೆ. ದಿ.17.06.2025 ರಂದು ಚಾಸಾ-1 ರವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ನಂತರ ದಿ.17.06.2025 ರಂದು ತನಿಖೆಯು ಪೂರ್ಣಗೊಂಡಿದ್ದು ಆರೋಪಿಗಳ ವಿರುದ್ಧ ಆರೋಪವು ಸಾಬೀತಾದ ಕಾರಣ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ನಂತರ ದಿ.12.07.2025 ರಂದು ನ್ಯಾಯಾಲಯದ ಆದೇಶದಂತೆ ಚಾಸಾ-1 ರವರಿಗೆ ವಸ್ತುಗಳನ್ನು ಬಿಡಗಡೆ ಮಾಡಲಾಗಿರುತ್ತದೆ. ದಿ.25.08.2025 ರಂದು ವಸ್ತುಗಳನ್ನು ಬಿಡಗಡೆ ಮಾಡಿದ ಕುರಿತು ನ್ಯಾಯಾಲಯಕ್ಕೆ ವರದಿಯನ್ನು ನೀಡಿರುತ್ತೇನೆ.

ದಿ.12.03.2025 ರಂದು ಚಾಸಾ-18 ರವರಿಗೆ ನೀಡಿದ ಮನವಿಯನ್ನು ನೋಡಿ ಗುರುತಿಸಿದ್ದು, ಸದರಿ ಮನವಿಯನ್ನು ನಿಪಿ-14 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ದಿ.06.05.2025 ರಂದು ಚಾಸಾ-18 ರವರು ನೀಡಿದ ವರದಿಯನ್ನು ನೋಡಿ ಗುರುತಿಸಿದ್ದು, ಸದರಿ ವರದಿಯನ್ನು ನಿಪಿ-15 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು

ಗುರುತಿಸಲಾಯಿತು. ದಿ.17.04.2025 ರಂದು ರಾಜಸ್ವ ಅಧಿಕಾರಿಗಳು ನೀಡಿರುವ ವರದಿಯನ್ನು ದಾಖಲಾತಿಗಳೊಟ್ಟಿಗೆ ನಿಪಿ-16 ಎಂದು ಗುರುತಿಸಲಾಯಿತು. ದಿ.05.04.2025 ರಂದು ಚಾಸಾ-12 ರವರಿಗೆ ನೀಡಿರುವ ಮನವಿಯನ್ನು ನಿಪಿ-17 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು. ದಿ.05.04.2025 ರಂದು ಚಾಸಾ-17 ರವರಿಗೆ ನೀಡಿದ ಮನವಿಯನ್ನು ನೋಡಿ ಗುರುತಿಸಿದ್ದು, ಸದರಿ ಮನವಿಯನ್ನು ನಿಪಿ-18 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ದಿ.01.03.2025 ರಂದು ದಾಖಲಿಸಿಕೊಂಡ ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ನಿಪಿ-19 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ಚಾಸಾ-10 ರವರು ನಿಪಿ-12 ರಂತೆ, ಚಾಸಾ-11 ರವರು ನಿಪಿ-13 ರಂತೆ ನನ್ನ ಮುಂದೆ ಹೇಳಿಕೆಯನ್ನು ನೀಡಿರುತ್ತಾರೆ.

ಚಾಸಾ-1 ರವರು ನಿಪಿ-3 ರಂತೆ ಮುಂದುವರೆದ ಹೇಳಿಕೆಯನ್ನು ನನ್ನ ಮುಂದೆ ಹೇಳಿಕೆಯನ್ನು ನೀಡಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ ಮತ್ತು ವಶಪಡಕೊಂಡಿದ್ದ ವಸ್ತುಗಳನ್ನು ಪುನಃ ನೋಡಿದ್ದಲ್ಲಿ ಗುರುತಿಸುವುದಾಗಿ ನುಡಿದಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ವಿ.ಜೆ. ವಕೀಲರಿಂದಃ**

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಕಂದಾಯ ಅಧಿಕಾರಿಗಳಿಂದ ಯಾವುದೇ ದಾಖಲಾತಿಗಳನ್ನು ಪಡೆದುಕೊಂಡಿರುವುದಿಲ್ಲ. ನಿಪಿ-2 ರಲ್ಲಿ ಸ.ನಂ.50 ರಲ್ಲಿ ಘಟನೆ ನಡೆದಿರುತ್ತದೆ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ. ಅದರ ಬಾಬ್ತು ಪಹಣಿಯನ್ನು ಪಡೆದುಕೊಂಡರೆ ಸದರಿ ಜಮೀನು ಯಾರಿಗೆ ಸೇರಿರುತ್ತದೆ ಎಂದು ತಿಳಿದು ಬರುತ್ತದೆ ಎಂದರೆ ಸರಿ. ಗಾಯಾಳು ಯಾವ ದಿನ ಆಸ್ಪತ್ರೆಗೆ ದಾಖಲಾಗಿ ಮತ್ತು ಯಾವ ದಿನ ಹೊರ ಹೋಗಿರುತ್ತಾರೆ ಎಂದು ಕೇಳಿದರೆ ಸಾಕ್ಷಿಯು ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಸಾಮಾನ್ಯವಾಗಿ ಯಾವುದೇ ಪ್ರಕರಣದಲ್ಲಿ ವಸ್ತುಗಳನ್ನು ವಶಪಡಿಸಿಕೊಂಡಿದ್ದಲ್ಲಿ ಅವುಗಳನ್ನು ಜೋಪಾನ ಮಾಡಿ ಸೀಲು ಮಾಡುತ್ತೇವೆ ಎಂದರೆ ಸರಿ, ಅದನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡ ನಂತರ ನ್ಯಾಯಾಲಯದ ಮುಂದೆ ಅದನ್ನು ತೆರೆಯಲಾಗುತ್ತದೆ ಎಂದರೆ ಸರಿ. ತನಿಖೆಯ ಸಮಯದಲ್ಲಿ ಕಳಸ ವೈದ್ಯಾಧಿಕಾರಿಯಿಂದ ವರದಿಯನ್ನು ಸ್ವೀಕರಿಸಿಕೊಂಡಿರುತ್ತೇನೆ ಎಂದರೆ ಸರಿ. ಮಹಜರ್ ಕಾಲದಲ್ಲಿ ವಶಪಡಿಸಿಕೊಂಡಂತಹ ವಸ್ತುವನ್ನು ಡಾಕ್ಟರ್ ಸಮಕ್ಷಮದಲ್ಲಿ ಅದನ್ನು ಹಾಜರುಪಡಿಸಿರುವುದಿಲ್ಲ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಗೆ ಮೂಳೆ ಮುರಿದಿದ್ದಲ್ಲಿ ಅದನ್ನು X-ray ಮುಖಾಂತರ ಕಂಡು ಹಿಡಿಯುತ್ತಾರೆ ಎಂದರೆ ಸರಿ. ಪ್ರಸ್ತುತ ಪ್ರಕರಣದ ತನಿಖೆಯಲ್ಲಿ ಆ ರೀತಿಯಾದ X-ray ನ್ನು ವೈದ್ಯಾಧಿಕಾರಿಯಿಂದ ಪಡೆದುಕೊಂಡಿರುವುದಿಲ್ಲ.

ಆರೋಪಿಯ ಸ್ವ ಇಚ್ಛಾ ಹೇಳಿಕೆಯ ಪ್ರತೀ ಪುಟದಲ್ಲಿ ಸಹಿಯನ್ನು ಪಡೆದಿರುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿವಿಧ ದಿನ ವಿವಿಧ ದಾಖಲಾತಿಗಳನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಇಲಾಖಾ ಅಂಕಿ

ಅಂಶಕ್ಕೊಸ್ಕರ ಆರೋಪಿಯ ವಿರುದ್ಧ ಪ್ರ.ವ.ವರದಿಯನ್ನು ದಾಖಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.